ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ: 27 : ಗ್ರಾಪಸ: 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:06-07-2015.

# ಅಧಿಕೃತ ಜ್ಞಾಪನ

ವಿಷಯ: ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲಾ ವಿಧವಾದ ಅನುದಾನದಿಂದ ಗ್ರಾಮ ಪಂಚಾಯತಿಗಳ ಅಭಿವೃದ್ಧಿ, ಸ್ಥಳೀಯ ಯೋಜನೆ ಸಿದ್ಧಪಡಿಸಲು, ಅನುಷ್ಠಾನದ ಸಮಸ್ಯೆಗಳನ್ನು ನಿವಾರಿಸಲು ರಾಜ್ಯ ಮಟ್ಟದ 'ಅಧಿಕಾರಯುಕ್ತ ಉನ್ನತ ಸಮಿತಿ' ರಚಿಸುವ ಬಗ್ಗೆ.

ಉಲ್ಲೇಖ: ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಪತ್ರ ಸಂಖ್ಯೆ: 11015/123/2015/ಪಿ.ಬಿ, ದಿನಾಂಕ: 28.05.2015.

*****

ದಿನಾಂಕ: 08.05.2015 ರಂದು ನವದೆಹಲಿಯಲ್ಲಿ ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಆಯೋಜಿಸಿದ್ದ "ರಾಷ್ಟ್ರದ ಪಂಚಾಯತ್ ರಾಜ್ ವ್ಯವಸ್ಥೆಯ ಒಟ್ಟಾರೆ ಚಿತ್ರಣ" ಕಾರ್ಯಾಗಾರದಲ್ಲಿ ಕೇಂದ್ರ ಸರ್ಕಾರವು ಸೂಚಿಸಿದಂತೆ, ಗ್ರಾಮ ಪಂಚಾಯತಿಗಳಿಗೆ ಲಭ್ಯವಾಗುವ 14ನೇ ಹಣಕಾಸು ಆಯೋಗದ ಅನುದಾನ, ಎಮ್.ಜಿ.ಎನ್.ಆರ್.ಇ.ಜಿ.ಎ, ಎನ್.ಆರ್.ಎಲ್.ಎಮ್, ಎಲ್ಲಾ ವಿಧವಾದ ಕೇಂದ್ರ ಮತ್ತು ರಾಜ್ಯ ಸರ್ಕಾರ ವಿವಿಧ ಯೋಜನೆಗಳಡಿ ಬಿಡುಗಡೆ ಮಾಡುವ ಅನುದಾನ, ಶಾಸನ ಬದ್ಧ ಅನುದಾನ ಮತ್ತು ಸ್ವಂತ ಸಂಪನ್ಮೂಲಗಳನ್ನು ಒಟ್ಟಾರೆ ಕ್ರೋಢಿಕರಿಸಿ "ಗ್ರಾಮ ಪಂಚಾಯತಿ ಅಭಿವೃದ್ಧಿ ಕ್ರಿಯಾ ಯೋಜನೆಯನ್ನು" ಸಿದ್ಧಪಡಿಸಬೇಕಾಗಿದೆ. ಈ ಯೋಜನೆಯನ್ನು ಸಿದ್ಧಪಡಿಸಲು ಅನುಷ್ಠಾನೀಕರಿಸಿದ ಉಸ್ತುವಾರಿ ವಹಿಸಲು ಹಾಗೂ ಅಗತ್ಯ ಮಾಹಿತಿ ಮತ್ತು ಮಾರ್ಗದರ್ಶನ ನೀಡಲು ರಾಜ್ಯ ಮಟ್ಟದಲ್ಲಿ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಹಾಗೂ ಅಧ್ಯಕ್ಷ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯನ್ನು ರಚಿಸಬೇಕಾಗಿದೆ. ಜಿಲ್ಲಾ ಮಟ್ಟ ಹಾಗೂ ತಾಲ್ಲೂಕು ಮಟ್ಟದಲ್ಲಿಯೂ ಸಹ ಇದಕ್ಕೆ ನೆರವಾಗುವ ತಂಡಗಳನ್ನು ರಚಿಸಿ ತಾಲ್ಲೂಕು ಮಟ್ಟದ ತಂಡವು ತಾಲ್ಲೂಕು ಹಂತದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಅಲ್ಲಿನ ಬೇಡಿಕೆ ಮತ್ತು ಅವಶ್ಯಕತೆಯನ್ನಾಧರಿಸಿ ಯೋಜನೆ ಸಿದ್ಧಪಡಿಸಲು, ನೆರವಾಗಲು ತರಬೇತಿ ನೀಡುವ ಯೋಜನೆಯ ಅನುಷ್ಠಾನದ ಬಗ್ಗೆ ಉಸ್ತುವಾರಿ ವಹಿಸುವ ಜವಬ್ದಾರಿ ನಿರ್ವಹಿಸುವ ಸಲುವಾಗಿ ಎಲ್ಲಾ ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಮುಖ್ಯಸ್ಥರನ್ನೊಳಗೊಂಡಂತೆ ರಾಜ್ಯ ಮಟ್ಟದಲ್ಲಿ ಅಧಿಕಾರಯುಕ್ತ ಉನ್ನತ ಮಟ್ಟದ ಸಮಿತಿಯನ್ನು ಈ ಕೆಳಕಂಡ ಅಧಿಕಾರಿಗಳೊಂದಿಗೆ ರಚಿಸಲಾಗಿದೆ.

1. ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ-ಅಧ್ಯಕ್ಷರು.
2. ಆಯುಕ್ತರು (ಎಂ.ಜಿ.ಎನ್.ಆರ್.ಇ.ಜಿ.ಎ) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ-ಸದಸ್ಯರು.
3. ಆಯುಕ್ತರು (ಗ್ರಾಮೀಣ ನೀರು ಸರಬರಾಜು), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ-ಸದಸ್ಯರು.
4. ಮಿಷನ್ ಡೈರೆಕ್ಟರ್ (ಎನ್.ಆರ್.ಎಲ್.ಎಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ-ಸದಸ್ಯರು.
5. ನಿರ್ದೇಶಕರು (ಎ.ಎನ್.ಎಸ್.ಎಸ್.ಐ.ಆರ್.ಡಿ) ಮೈಸೂರು-ಸದಸ್ಯರು.
6. ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ-ಸದಸ್ಯ ಕಾರ್ಯದರ್ಶಿ.
7. ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ-ಸದಸ್ಯರು.

8. ನಿರ್ದೇಶಕರು (ಮೂಲಭೂತ ಸೌಕರ್ಯ-1), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ-ಸದಸ್ಯರು.
9. ನಿರ್ದೇಶಕರು (ಯೋಉಮಾ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ-ಸದಸ್ಯರು.
10. ನಿರ್ದೇಶಕರು (ಇ-ಆಡಳಿತ), ಗ್ರಾಮೀಣಾಭವೃದ್ಧಿ ಮತ್ತು ಪಂ.ರಾಜ್ ಇಲಾಖೆ-ಸದಸ್ಯರು.
11. ಅಪರ ಮುಖ್ಯಸ್ಥರು (ಕಾರ್ಯಾಚರಣೆ), ಗ್ರಾಮ ಸ್ವರಾಜ್ ಯೋಜನೆ-ಸದಸ್ಯರು.
12. ಶ್ರೀ ಪಿ.ವಿ.ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ-ಸದಸ್ಯರು.

(ಕೆ.ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:-

1. ಆಯುಕ್ತರು (ಎಂ.ಜಿ.ಎನ್.ಆರ್.ಇ.ಜಿ.ಎ) ಗ್ರಾಮೀಣಾಭಿವೃದ್ಧಿ ಆಯಕ್ತಾಲಯ.
2. ಆಯುಕ್ತರು (ಗ್ರಾಮೀಣ ನೀರು ಸರಬರಾಜು), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
3. ಮಿಷನ್ ಡೈರೆಕ್ಟರ್ (ಎನ್.ಆರ್.ಎಲ್.ಎಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
4. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ದಿ ಸಂಸ್ಥೆ, ಮೈಸೂರು.
5. ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7. ನಿರ್ದೇಶಕರು (ಮೂಲಭೂತ ಸೌಕರ್ಯ-1), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
8. ನಿರ್ದೇಶಕರು (ಯೋಉಮಾ), ಗ್ರಾಮೀಣಾಭವೃದ್ಧಿ ಮತ್ತು ಪಂ.ರಜ್ ಇಲಾಖೆ
9. ನಿರ್ದೇಶಕರು (ಇ-ಆಡಳಿತ), ಗ್ರಾಮೀಣಾಭವೃದ್ಧಿ ಮತ್ತು ಪಂ.ರಾಜ್ ಇಲಾಖೆ.
10. ಅಪರ ಮುಖ್ಯಸ್ಥರು (ಕಾರ್ಯಾಚರಣೆ), ಗ್ರಾಮ ಸ್ವರಾಜ್ ಯೋಜನೆ.
11. ಶ್ರೀ ಪಿ.ವಿ.ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ.
12. ಇಲಾಖಾ ವೆಬ್ ಸೈಟ್‌ಗೆ ಅಳವಡಿಸಲು
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಮಾಹಿತಿಗಾಗಿ

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿ/ಸಹಾಯಕಿ.